**ಚಿತ್ರಪಟ ಕಥನ**



# ಕಾಡನೋಟಕ್ಕೆ ಅನನ್ಯ ಫ್ರೇಮ್

**ಹಾವುಗಳ ರಕ್ಷಣಾ ಕಾರ್ಯದಲ್ಲಿ ತೊಡಗಿಕೊಂಡಿದ್ದ ಪ್ರಥಮೇಶ್ ಅವರಿಗೆ ಇದೇ ಹಾದಿಯಲ್ಲಿ ಪ್ರಕೃತಿ ಹಾಗೂ ವನ್ಯಜೀವಿ ಛಾಯಾಗ್ರಹಣದ ಸಾಂಗತ್ಯವೂ ದೊರಕಿದೆ. ನಿಸರ್ಗದ, ಜೀವ ಜಗತ್ತಿನ ಅಚ್ಚರಿಗಳನ್ನು ಕಾಡ ನಡುವಿನಿಂದ ಹೆಕ್ಕಿ ತರುತ್ತಿರುವ ಅವರು, ಆ ಅಮೃತಕ್ಷಣಗಳನ್ನು ಸಹೃದಯರಿಗೂ ಕಾಣಿಸುತ್ತಿದ್ದಾರೆ.**

**■ ಸುಮಲತಾ ಎನ್‌**

‘ರಾತ್ರಿ ಬೆಂಬಿಡದೇ ಸುರಿಯುತ್ತಿದ್ದ ಮಳೆ. ಕಣ್ಣಿಗೇನೂ ದಕ್ಕದಂಥ ಕಗ್ಗತ್ತಲು. ಮಳೆ ಅರೆಕ್ಷಣ ಬಿಡುವು ಕೊಡುತ್ತಿದ್ದಂತೆ ಗುಂಯ್‌ಗುಡುವ ಕೀಟಗಳ ಸದ್ದಿನ ಹೊರತು ಮತ್ತೆಲ್ಲವೂ ಸ್ತಬ್ಧ. ಆದರೆ ಅತ್ಯುತ್ತಮ ಚಿತ್ರವೊಂದನ್ನು ತೆಗೆಯಲೇಬೇಕೆಂದು ಹಟ ಹಿಡಿದಂತೆ ಕುಳಿತ ನನಗೆ ಅಲ್ಲಿ ಇದ್ದಕ್ಕಿದ್ದಂತೆ ಮಾಯಾಲೋಕವೇ ಗೋಚರಿಸಿತ್ತು. ನೋಡನೋಡುತ್ತಿದ್ದಂತೆ ಮರವೊಂದರ ತುಂಬಾ ಬೆಳಕು ಆವರಿಸಿತು. ಏಕಕಾಲಕ್ಕೆ ಸಾವಿರಾರು ಮಿಂಚುಹುಳುಗಳು ಸೇರಿ ಬೆಳಕಿನ ಲೋಕವನ್ನೇ ಸೃಷ್ಟಿಸಿದ್ದವು. ಆ ಮಾಂತ್ರಿಕ ಜಗತ್ತನ್ನು ನನ್ನ ಕ್ಯಾಮೆರಾದಲ್ಲಿ ಹಿಡಿದಿಟ್ಟೆ. ‘ದಿ ಮ್ಯಾಜಿಕಲ್ ಟ್ರೀ’ ಶೀರ್ಷಿಕೆಯ ಆ ಛಾಯಾಚಿತ್ರ ಹಲವರ ಮೆಚ್ಚುಗೆ ಗಳಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಅದ್ಭುತ ಅನುಭವವೊಂದನ್ನು ನನಗೆ ನೀಡಿತು...’

ಛಾಯಾಗ್ರಹಣ ಎಂಬ ಹವ್ಯಾಸದ ಹಾದಿಯಲ್ಲಿ ತಮಗೆ ಎದುರಾದ ರೋಚಕ ಕ್ಷಣಗಳನ್ನು ವಿವರಿಸುವಾಗ, ಮಹಾರಾಷ್ಟ್ರ ಮೂಲದ ಛಾಯಾಗ್ರಾಹಕ ಪ್ರಥಮೇಶ್ ಘಾಡೇಕರ್ ಅವರ ಧ್ವನಿಯಲ್ಲಿ ಧನ್ಯತೆಯ ಭಾವ ತುಳುಕುತ್ತದೆ. ಇಂಥ ಹಲವು ಅದ್ಭುತ ಅನುಭವಗಳು ಅವರ ನೆನಪಿನ ಬುತ್ತಿಯಲ್ಲಿವೆ.

ಮಹಾರಾಷ್ಟ್ರ ಬದ್ಲಾಪುರ ಎಂಬ ನಗರದಲ್ಲಿ ಹುಟ್ಟಿ ಬೆಳೆದ ಪ್ರಥಮೇಶ್ ಅವರಿಗೆ ಕಾಡುಮೇಡು, ವನ್ಯಜೀವಿ, ಪ್ರಕೃತಿ ಎಂಬುದು ಚಿತ್ರಗಳಲ್ಲಷ್ಟೇ ಕಾಣುವ ಸಂಗತಿಯಾಗಿತ್ತು. ಆದರೆ ಸ್ನೇಹಿತರೊಬ್ಬರ ಒಡನಾಟ ಅವರ ಬದುಕಿನ ದಿಕ್ಕನ್ನು ಬದಲಾಯಿಸಿತ್ತು.

‘ನನ್ನ ಗೆಳೆಯ ವನ್ಯಜೀವಿಗಳ ಸಂರಕ್ಷಣೆ ಹಾಗೂ ಪುನರ್ವಸತಿ ಕಾರ್ಯದಲ್ಲಿ ತೊಡಗಿಕೊಂಡಿದ್ದ. ಅವನ ಮೂಲಕ ಪ್ರಕೃತಿ, ವನ್ಯಜೀವಿಗಳ ಲೋಕ ಪರಿಚಯವಾಯಿತು. ಆಗಿನಿಂದ ನನ್ನ ಆಲೋಚನಾ ಲಹರಿಯೇ ಬದಲಾಯಿತು. ಮೊದಮೊದಲು ಹಾವುಗಳ ರಕ್ಷಣೆ ಕುರಿತು ತಿಳಿದುಕೊಂಡೆ. ಹನ್ನೆರಡನೇ ವಯಸ್ಸಿನಿಂದ ಸ್ವತಃ ರಕ್ಷಣಾ ಕಾರ್ಯದಲ್ಲಿ ತೊಡಗಿಕೊಂಡೆ. ನಂತರ ಇತರೆ ಸರೀಸೃಪ ಹಾಗೂ ಕೀಟ ವೈವಿಧ್ಯ, ಅವುಗಳ ಜೀವನ ವಿಧಾನಗಳ ಕುರಿತು ಆಸಕ್ತಿ ಬೆಳೆಯಿತು. ಈ ಬಗ್ಗೆ ಸಾಕಷ್ಟು ಓದಿ ತಿಳಿದುಕೊಂಡೆ. ಜನರಲ್ಲಿ ಜಾಗೃತಿ ಮೂಡಿಸುವ ಮಾಧ್ಯಮವಾಗಿ ಛಾಯಾಗ್ರಹಣವನ್ನು ಆಯ್ಕೆ ಮಾಡಿಕೊಂಡೆ’

